**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ & ಎಮ.ಎ.ಸಿ.ಟಿ XV, ಜೇವರ್ಗಿ**

**MVC No.1089/2022**

**RW-1**

**ಸಾಕ್ಷಿಗೆ ದಿನಾಂಕ 24-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಮೌಲಾ ಅಲಿ |
| ತಂದೆಯ ಹೆಸರು | ಃ | ಅಲ್ಲಾ ಬಕ್ಷಾ |
| ವಯಸ್ಸು | ಃ | 39 ವರ್ಷ |
| ಉದ್ಯೋಗ | ಃ | ಮುಖ್ಯ ಪೇದೆ, ಜೇವರ್ಗಿ ಪೊಲೀಸ್ ಠಾಣೆ |
| ವಾಸಸ್ಥಳ | ಃ | ಜೇವರ್ಗಿ |

**ಮುಖ್ಯವಿಚಾರಣೆಃ ಶ್ರೀ VCMP 2ನೇ ಎದುರುದಾರರ ಪರ ವಕೀಲರಿಂದ**

ನಾನು 01-08-2018 ರಿಂದ 30-06-2022ರವರೆಗೆ ಯಡ್ರಾಮಿ ಪೋಲಿಸ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 01-02-2022ರಂದು ನಾನು SHO ಕರ್ತವ್ಯದಲ್ಲಿದ್ದಾಗ ರಾತ್ರಿ 07-30 ಗಂಟೆ ಸಮಯದಲ್ಲಿ ಫಿರ್ಯಾದಿದಾರರಾದ ಗೋವಿಂದಮ್ಮ ದಾಸರ್ ರವರು ಠಾಣೆಗೆ ಹಾಜರಾಗಿ ಕನ್ನಡ ಭಾಷೆಯಲ್ಲಿ ಗಣಕೀಕೃತಕರಿಸಿದ ಅರ್ಜಿ ದೂರನ್ನು ಹಾಜರುಪಡಿಸಿದ ಮೇರೆಗೆ ಅದನ್ನು ಠಾಣಾ ಗು.ನಂ.83/2022ರಂತೆ ಭಾ.ದಂ.ಸಂ.ಕಲಂ 279, 338 ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು FIR ಹಾಗೂ ದೂರನ್ನು ಹೆಚ್.ಸಿ-495 ಭಾಗಪ್ಪರವರ ಮೂಲಕ ನ್ಯಾಯಲಯಕ್ಕೆ ನಿವೇದಿಸಿಕೊಂಡಿರುತ್ತೆನೆ ಹಾಗೂ ಸದರಿ FIR ಹಾಗೂ ದೂರನ್ನು ನಮ್ಮ ಮೇಲಾಧಿಕಾರಿಗಳಿಗೆ ಕಳುಸಿರುತ್ತೇನೆ.

ದಿನಾಂಕ 02-05-2022 ರಂದು ಗೂಗಿಹಾಳ ಗ್ರಾಮದ ತಾಂಡಾ ದಾಟಿದ ನಂತರ ಮಹಾಂತಗೌಡ ರವರ ಜಮೀನಿನ ಹತ್ತಿರ ಇರುವ ರಸ್ತೆಯ ಮೇಲೆ ಅಪಘಾತದ ವಿಚಾರವಾಗಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ.

ಈ ಪ್ರಕರಣದಲ್ಲಿ ಪಂಚನಾಮೆ ಸಮಯದಲ್ಲಿ ಪಂಚರ ಸಮಕ್ಷಮ ಸ್ಕೆಚ್ಚನ್ನು ನಾನೇ ತಯಾರಿಸಿರುತ್ತೇನೆ. ಸದರಿ ಸ್ಕೆಚ್ಚನ್ನು ಪಂಚನಾಮೆಯಲ್ಲೇ ನಮೂದಿಸಿರುತ್ತೇನೆ. ಸದರಿ ಪ್ರಕರಣದಲ್ಲಿ

ಸಲ್ಲಿಸಿದ ಪಂಚನಾಮೆ ಹಾಗೂ ಸ್ಕೆಚ್ ಸರಿಯಾಗಿದೆ. ಪಂಚನಾಮೆ ಮತ್ತು ಸ್ಕೆಚ್ ದಾಖಲಾತಿ ಪ್ರಕಾರ ಅಪಘಾತವು ರಸ್ತೆ ಮಧ್ಯ ಭಾಗದಲ್ಲಿ ಆಗಿರುತ್ತದೆ.

(ಈ ಹಂತದಲ್ಲಿ 2ನೇ ಎದುರುದಾರರ ಪರ ವಕೀಲರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಶ್ರೀ ವಿ.ಸಿ.ಎಂ.ಪಿ. 2ನೇ ಎದುರುದಾರರ ಪರ ವಕೀಲರಿಂದಃ**

ಕೆಎ-32 ಟಿಸಿ-0255ರ ಟ್ರ್ಯಾಕ್ಟರ್ ಚಾಲಕನ ತಪ್ಪಿಲ್ಲದಿದ್ದರೂ ಸಹ ಆತನ ಮೇಲೆ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರನಾದ ವೀರೇಶನು ಕುರಿ ಮೇಯಿಸುತ್ತಾ ರಸ್ತೆಯ ಮಧ್ಯ ಭಾಗದಲ್ಲಿ ಬಂದ ಕಾರಣ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ಅರ್ಜಿದಾರ ರಸ್ತೆ ದಾಟುವ ಸಮಯದಲ್ಲಿ ಅಪಘಾತವಾಗಿರುತ್ತದೆಂದು ನುಡಿಯುತ್ತಾರೆ. ನಾನು ಪ್ರಕರಣದಲ್ಲಿ ಸರಿಯಾಗಿ ತನಿಖೆ ಕೈಗೊಳ್ಳದೇ ಟ್ರ್ಯಾಕ್ಟರ್ ಚಾಲಕನ ಮೇಲೆ ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಧನ ಕೊಡಿಸುವ ಸಲುವಾಗಿ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್.ಎಸ್.ಪಿ.ಪಿ. ಅರ್ಜಿದಾರರ ಪರ ವಕೀಲರಿಂದ**

ಅರ್ಜಿದಾರ ಕುರಿಗಳನ್ನು ಮೇಯಿಸುತ್ತಾ ಕುರಿಗಳನ್ನು ಸಾಗಿಸುತ್ತಾ ಗೂಗಿಹಾಳ ಗ್ರಾಮದ ಕಡೆಗೆ ಹೋಗುತ್ತಿದ್ದಾಗ ಅಪಘಾತವಾಗಿದೆ ಎಂದರೆ ನಿಜ. ಟ್ರ್ಯಾಕ್ಟರ್ ವಾಹನ ಸದರಿ ಅರ್ಜಿದಾರನ ವಿರುದ್ಧ ದಿಕ್ಕಿನಿಂದ ಬಂದಿದ್ದು ಅರ್ಜಿದಾರ ರಸ್ತೆ ಮಧ್ಯ ಹೋಗುತ್ತಿದ್ದ ಕುರಿಗಳನ್ನು ರಸ್ತೆ ಪಕ್ಕಕ್ಕೆ ಸರಿಸುತ್ತಿದ್ದಾಗ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅರ್ಜಿದಾರ ಕುರಿಗಳನ್ನು ರಸ್ತೆ ಪಕ್ಕದಿಂದ ಸಾಗಿಸುತ್ತಾ ಹೋಗುತ್ತಿದ್ದರೂ ಆತ ರಸ್ತೆ ಮಧ್ಯ ಭಾಗದಲ್ಲಿ ಕುರಿಗಳನ್ನು ಸಾಗಿಸುತ್ತಿದ್ದ ಅಂತಾ ನನ್ನ ಪಂಚನಾಮೆಯ ಸ್ಕೆಚ್ ನಕಾಶೆಯಲ್ಲಿ ನಮೂದಿಸಿರುತ್ತೇನೆಂದರೆ ಸರಿಯಲ್ಲ.

**ಅರ್ಜಿದಾರರ ಪರ ವಕೀಲರಾದ ಶ್ರೀ ಎಸ್.ಎಸ್.ಪಿ. ವಕೀಲರು ಮಾಡಿದ ಪಾಟೀ ಸವಾಲನ್ನು 1ನೇ ಎದುರುದಾರರ ಪರ ಶ್ರೀ ಜಿ.ಬಿ. ವಕೀಲರು ತಮ್ಮ ಪರವಾಗಿ ಅಳವಡಿಸಿಕೊಳ್ಳಲು ಕೋರಿರುತ್ತಾರೆ.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ